ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 08॥ Udp/1263/2015-17 || R.NO.50495/91 ॥ ತಾರೀಕು : 08–03–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಕಡವಿನ ಬಾಗಿಲು ಕಳೆ ಹೆಚ್ಚಿಸಿದ ಆರಕ್ಷಕ ಮನೆಗಳು



**ಜನರ ರಕ್ಷಣೆಗಿರುವ ಆರಕ್ಷಕರಿಗೆ ಸರಿಯಾದ ನಿವಾಸಗಳಿಲ್ಲದಿರುವುದನ್ನು ಪರಿಗಣಿಸಿ ಸರಕಾರ ಹೊಸ ಮನೆಗಳನ್ನು ಆರಕ್ಷಕರಿಗಾಗಿ ಒದಗಿಸಿದ್ದು ಕುಂದಾಪುರದ ಕಡವಿನ ಬಾಗಿಲಿನ ಪಂಚಗಂಗಾವಳಿ ರಸ್ತೆಗೆ ಇದರಿಂದ ಹೊಸ ಕಳೆ ಬಂದಿದೆ. ರಸ್ತೆಯ ಬಲಬದಿಯಲ್ಲಿ ಪೋಲೀಸ್ ಅಧಿಕಾರಿಗಳಿಗಾಗಿ ಪ್ರತ್ಯೇಕ ಅಪಾರ್ಟ್‌ಮೆಂಟ್ ನಿರ್ಮಿಸಲಾಗಿದ್ದು 1.08ಕೋಟಿ ರೂ ವೆಚ್ಚದ ಈ ಕಟ್ಟಡ ಸಂಪೂರ್ಣಗೊಂಡು ಪೋಲಿಸ್ ಇಲಾಖೆಗೆ ಹಸ್ತಾಂತರಿಸಲ್ಪಟ್ಟಿದೆ. ಎಡಗಡೆಯಲ್ಲಿ 72 ಮನೆಗಳಿರುವ ಅಪಾರ್ಟ್‌ಮೆಂಟ್‌ಗಳು ಆ ಪ್ರದೇಶದ ರೂಪವನ್ನೇ ಬದಲಿಸಿದೆ. ಅಜೀರ್ಣವಾಗಿದ್ದ ಹಳೆಮನೆಗಳೆಲ್ಲ ಹೋಗಿ ಹೊಸಮನೆಗಳು ತಲೆಯೆತ್ತಿವೆ.**

ಕುಂದಾಪುರದಲ್ಲಿ ಸರಕಾರಿ ನೌಕರರಿಗೆ ಮುಖ್ಯವಾಗಿ ಪೋಲೀಸರಿಗೆ ವಾಸಿಸಲು ಸರಿಯಾದ ಮನೆ ಇಲ್ಲ. ನೂತನ ಮನೆ ಕಟ್ಟಲು ಸರಿಯಾದ ಜಾಗವಿಲ್ಲ ಎಂಬ ಕೊರಗು ಇತ್ತು. ಆದರೆ ಜಾಗವಿದೆ ಅದನ್ನು ಸರಿಯಾಗಿ ಬಳಸಿಕೊಂಡಿಲ್ಲ ಎಂದು ಮನವರಿಕೆ ಮಾಡಿದ ಮೇಲೆ ನಾಲ್ಕು ವರ್ಷಗಳ ಹಿಂದೆ ಸಬ್‌ಇನ್ಸ್‌ಪೆಕ್ಟರ್ ಮನೆ ಹಾಗೂ ಅಜೀರ್ಣಗೊಂಡು ಉಪಯೋಗಕ್ಕಿಲ್ಲದ ಮನೆಯಿರುವ ಕಡವಿನ ಬಾಗಿಲಿನ ರಸ್ತೆಯಲ್ಲಿರುವ ಸ್ಥಳವನ್ನು ಆರಕ್ಷಕರ ಮನೆ ಕಟ್ಟಲು ಅನುಕೂಲ ಎಂದು ಗುರುತಿಸಲಾಯಿತು.

ಇಂದು ಈ ಪ್ರದೇಶದಲ್ಲಿ ಇಷ್ಟು ಜಾಗ ಇತ್ತೇ ಎಂಬಂತೆ ತಲೆಯೆತ್ತಿರುವ ಕಟ್ಟಡಗಳನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಮುಂಬಯಿ, ಬೆಂಗಳೂರು, ಮುಂತಾದ ಮಹಾನಗರದಲ್ಲಿರುವಂತೆ ಒತ್ತಾಗಿ ಕಟ್ಟಿರುವ 6 ಬ್ಲಾಕ್‌ಗಳಲ್ಲಿ 72 ಮನೆಗಳು ಆರಕ್ಷಕರಿಗೆ ವಾಸಿಸಲು ಸಿದ್ಧವಾಗಿ ಈಗಾಗಲೇ ಹಲವರು ಇದನ್ನು ವಾಸಕ್ಕೆ ಪಡೆದೂ ಆಗಿದೆ.

ಒಟ್ಟು 12.96 ಕೋಟಿ ರೂ ವೆಚ್ಚದ ಈ ಮನೆಗಳನ್ನು ಕರ್ನಾಟಕ ಸ್ಟೇಟ್ ಪೋಲೀಸ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಶನ್ ಲಿ. ನಿರ್ಮಾಣ ಮಾಡಿದ್ದು ಕೋಟೇಶ್ವರದ ಅಂಕದಕಟ್ಟೆಯ ಮಂಜುಶ್ರೀ ಕನ್‌ಸ್ಟ್ರಕ್ಷನ್ ಕಂಪೆನಿ ಕಾಮಗಾರಿ ವಹಿಸಿಕೊಂಡು ಅವಧಿಗೆ ಮುನ್ನವೇ ಪೂರ್ಣವಾಡಿದೆ. ಆದರೆ ರಕ್ತೇಶ್ವರಿ ದೇವಸ್ಥಾನದ ಬಳಿ ನಿರ್ಮಾಣವಾಗುತ್ತಿರುವ ಮನೆಗಳ ಕಾಮಗಾರಿ ಮಾತ್ರ ಬಾಕಿ ಉಳಿದಿದ್ದು ಅದು ಸಹ ಮಾರ್ಚ್ ಒಳಗೆ ಪೂರ್ಣಗೊಳ್ಳಬಹುದು.

ಅಸಿಸ್ಟೆಂಟ್ ಇಂಜಿನಿಯರ್ ಸಂತೋಷ್ ಕುಮಾರ್ ಈ ಕಟ್ಟಡ ನಿರ್ಮಾಣದ ನಿರ್ವಹಣೆಯ ಉಸ್ತುವಾರಿ ವಹಿಸಿದ್ದು ಕಟ್ಟಡ ನಿರ್ಮಾಣ ಅತ್ಯುತ್ತಮವಾಗಿ ಆಗಿದೆ. ಅವಧಿ ಮುನ್ನವೇ ಪೋಲೀಸ್ ಇಲಾಖೆಗೆ ಕಟ್ಟಡ ಹಸ್ತಾಂತರ ಮಾಡಿದ್ದೇವೆ. ಆದರೆ ಮುಂದೆ ಕಟ್ಟಡವನ್ನು ಚೆನ್ನಾಗಿ ಇಟ್ಟುಕೊಳ್ಳುವುದು ಬಹಳ ಮುಖ್ಯ ಕರಾವಳಿಯ ವಾತಾವರಣ ಕಾಂಕ್ರಿಟ್ ಕಟ್ಟಡಕ್ಕೆ ಸಮಸ್ಯೆ ಒಡ್ಡುತ್ತಿರುವುದರಿಂದ ಆಗಾಗ ಕಟ್ಟಡಗಳ ನಿರ್ವಹಣೆ ಬಗ್ಗೆ ಜಾಗ್ರತೆ ವಹಿಸಬೇಕಾಗುತ್ತದೆ. ಬಣ್ಣ ಮಾತ್ರವಲ್ಲದೇ ಕಟ್ಟಡದ ಕಾಂಕ್ರಿಟ್ ವ್ಯವಸ್ಥೆಯಲ್ಲಿ ವಾತಾವರಣಗಳಿಂದ ಸ್ವಲ್ಪ ಬದಲಾವಣೆ ಆಗುವ ಸಾಧ್ಯತೆ ಇರುವುದರಿಂದ ವಾಸಿಸುವವರು ಸಹ ಈ ಬಗ್ಗೆ ಕಾಳಜಿ ವಹಿಸಬೇಕು ಎನ್ನುತ್ತಾರೆ.

ಸರಕಾರಿ ಕಟ್ಟಡಗಳ ನಿರ್ವಹಣೆಗೆ ಸಾಕಷ್ಟು ಹಣ ಮಂಜೂರಾತಿ ಇಲ್ಲದಿರುವುದರಿಂದ ಬಹುತೇಕ ಕಟ್ಟಡಗಳಲ್ಲಿ ಸಮಸ್ಯೆ ಕಾಣುತ್ತದೆ. ಈ ಕಟ್ಟಡಗಳಲ್ಲೂ ಅಂತಹ ಸಮಸ್ಯೆ ಕಾಡದಂತೆ ನೋಡಿದಲ್ಲಿ ಇದೇ ಅಂದ ಉಳಿಯಬಹುದು.

## ಶ್ರದ್ಧಾಂಜಲಿ



ಜನನ:
14–10–1938

ದೈವಾಧೀನ
22–02–2016

**ಕೆ.ಸುರೇಂದ್ರ ವಿಠಲ ಕಾಮತ್**
ಕೋಟೇಶ್ವರ

ಹಿರಿಯರಾಗಿದ್ದು, ಸದಾ ಉತ್ತಮ ವಿಚಾರಗಳ ಬಗ್ಗೆ
ಯೋಚಿಸಲು ಪ್ರೇರಣೆ ನೀಡಿದ, ಧಾರ್ಮಿಕ
ವ್ಯಾವಹಾರಿಕ, ಸಾಮಾಜಿಕ ಕ್ಷೇತ್ರದಲ್ಲಿ ಮುನ್ನಡೆಗೆ
ಸ್ಫೂರ್ತಿ ತುಂಬಿದ, ಕೌಟುಂಬಿಕ ಬದುಕಿನಲ್ಲಿ
ಪ್ರೀತಿ,ವಿಶ್ವಾಸಕ್ಕೆ ಪ್ರಾಮುಖ್ಯತೆ ನೀಡಿದ,
ಈ ಹಿರಿಯ ಚೇತನಕ್ಕೆ ನಮಿಸುತ್ತಾ , ಇವರ
ಮಾರ್ಗದರ್ಶನ ಸದಾ ಸ್ಮರಿಸುವ

ಶ್ರೀ.ಕೆ.ರಾಮರಾಯ ಗೋವಿಂದ್ರಾಯ ಕಾಮತ್ , ಕೋಟೇಶ್ವರ
ಶ್ರೀಮತಿ ದೇವಕಿ ರಾಮರಾಯ ಕಾಮತ್, ಕೋಟೇಶ್ವರ
ಶ್ರೀಮತಿ ದೀಕ್ಷಾ ಕೃಷ್ಣ ಕಾಮತ್, ವಾಷಿಂಗ್ಟನ್ DC
ಕುಮಾರಿ ಕೆ.ಹರ್ಷಾ ಕಾಮತ್, ಕೋಟೇಶ್ವರ

ಸಿಬ್ಬಂದಿ ಹಾಗೂ ನೌಕರ ವರ್ಗ
**L.G. ಇಂಡಸ್ಟ್ರೀಸ್ ಕೋಟೇಶ್ವರ**
ತಯಾರಕರು "SUNRISE RIGID PVC PIPES